ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆ

ಉರ್ದು ಮತ್ತು ಇತರೆ ಅಲ್ಪಸಂಖ್ಯಾತ ಭಾಷಾ ಶಾಲೆಗಳ ನಿರ್ದೇಶನಾಲಯ, ಆಯುಕ್ತರ ಕಚೇರಿ,

ನೃಪತುಂಗ ರಸ್ತೆ, ಬೆಂಗಳೂರು 560001

ಎಂ.ಸಿ.9/ಮ.ಅ.ಸಂ.ಶಾ.ಘೋ/ಅ/01/2015-16 ದಿನಾಂಕ: 05/02/2016

:ಜ್ಞಾಪನ:

ವಿಷಯ: ಮತೀಯ ಅಲ್ಪಸಂಖ್ಯಾತ ಶಾಲೆಗಳೆಂದು ಘೋಷಿಸುವ ಕುರಿತು.

ಉಲ್ಲೇಖ: ಸರ್ಕಾರಿ ಆದೇಶ ಸಂಖ್ಯೆ: ಇಡಿ 27 ಮಾಹಿತಿ 2012(ಭಾಗ-1), ಬೆಂಗಳೂರು, ದಿನಾಂಕ: 18-06-2014.

******

ಪ್ರಸ್ತಾವನೆ:

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಈ ಕೆಳಕಂಡ ಮತೀಯ ಆಡಳಿತ ಮಂಡಳಿಯವರು ಸದರಿ ಶಾಲೆಗಳನ್ನು ಮತೀಯ ಅಲ್ಪಸಂಖ್ಯಾತ ಶಾಲೆಗಳೆಂದು ಘೋಷಿಸಲು ಪ್ರಸ್ತಾವನೆಯನ್ನು ಸಂಬಂಧಿಸಿದ ಉಪನಿರ್ದೇಶಕರು(ಆಡಳಿತ), ಸಾ.ಶಿ.ಇ, ಇವರಿಗೆ ಸಲ್ಲಿಸಿರುತ್ತಾರೆ. ಸದರಿ ಪ್ರಸ್ತಾವನೆಯನ್ನು ಸಂಬಂಧಿಸಿದ ಉಪನಿರ್ದೇಶಕರು(ಆಡಳಿತ), ಸಾ.ಶಿ.ಇ, ಇವರು ಪರಿಶೀಲಿಸಿ ಸ್ಪಷ್ಟ ಶಿಫಾರಸ್ಸಿನೊಂದಿಗೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಆದೇಶ:

ಅದರಂತೆ, ದಿನಾಂಕ: 04-02-2016 ರಂದು ನಡೆದ ಭಾಷಾ/ಮತೀಯ ಅಲ್ಪಸಂಖ್ಯಾತ ಘೋಷಣಾ ಪರಿಶೀಲನಾ ಸಮಿತಿಯ ಸಭೆಯಲ್ಲಿ ಈ ಕೆಳಕಂಡ ಶಾಲೆಗಳ ಪ್ರಸ್ತಾವನೆಯನ್ನು ಪರಿಶೀಲಿಸಿದೆ. ಸದರಿ ಶಾಲೆಗಳ ಆಡಳಿತ ಮಂಡಳಿಯವರು ಉಲ್ಲೇಖಿತ ಸರ್ಕಾರಿ ಆದೇಶದನ್ವಯ ಮತೀಯ ಅಲ್ಪಸಂಖ್ಯಾತ ಶಾಲೆಗಳ ಘೋಷಣಾ ಮಾನದಂಡಗಳನ್ನು ಪೂರೈಸಿ ಸೂಕ್ತ ದಾಖಲೆಗಳನ್ನು ಒದಗಿಸಿರುವುದರಿಂದ ಘೋಷಣಾ ಸಮಿತಿಯು ಈ ಕೆಳಕಂಡ ಅನುದಾನ ರಹಿತ ಶಾಲೆಗಳನ್ನು ಷರತ್ತುಗಳ ಅನ್ವಯ ಮತೀಯ ಅಲ್ಪಸಂಖ್ಯಾತ ಶಾಲೆಗಳೆಂದು ಘೋಷಿಸಿ ಆದೇಶಿಸಿದೆ.

| ಕ್ರ.ಸಂ | ಆಡಳಿತ ಮಂಡಳಿಯ ವಿವರ | ಶಾಲೆಯ ವಿವರ | ಘೋಷಣೆ ನೀಡಿರುವ ತರಗತಿ | ಶಾಲೆಯ ವಿಧ & ಪಠ್ಯಕ್ರಮ | ಘೋಷಣಾ ಧರ್ಮದ ವಿವರ |
|---|---|---|---|---|---|
| 1 | ದಾರೂಲ್ ಅರ್ಕಮ್ ಮಹದುಲ್ಲಾ ಖುರಾನ್ ಟ್ರಸ್ಟ್, ರಿಂಗ್ ರೋಡ್, 2ನೇ ಸ್ಟೇಜ್, ಸದಾಶಿವನಗರ, ತುಮಕೂರು-572102. | ಡಿ.ಎ.ಟಿ ಪಬ್ಲಿಕ್ ಶಾಲೆ, ರಿಂಗ್ ರೋಡ್, 2ನೇ ಸ್ಟೇಜ್, ಸದಾಶಿವನಗರ, ತುಮಕೂರು-572102. | 1 ರಿಂದ 10ನೇ ತರಗತಿ (ಪ್ರಾಥಮಿಕ & ಪ್ರೌಢ ಶಾಲೆ) | ಅನುದಾನ ರಹಿತ ರಾಜ್ಯ ಪಠ್ಯಕ್ರಮ | ಮುಸ್ಲಿಂ |
| 2 | ಸಂತ ಡೊಮಿನಿಕ್ ಎಜುಕೇಷನ್ ಟ್ರಸ್ಟ್ (ರಿ), ಮರಿಯಾಶ್ರಮ, ಬಡಕಬೈಲು, ಮೊಳಲಿ-574219, ಮಂಗಳೂರು, ದಕ್ಷಿಣ ಕನ್ನಡ ಜಿಲ್ಲೆ. | ಸಂತ ಡೊಮಿನಿಕ್ ಹಿರಿಯ ಪ್ರಾಥಮಿಕ ಶಾಲೆ, ಮರಿಯಾಶ್ರಮ, ಬಡಕಬೈಲ್, ಮೊಳಲಿ-574219, ಬಂಟ್ವಾಳ, ಮಂಗಳೂರು, ದಕ್ಷಿಣ ಕನ್ನಡ ಜಿಲ್ಲೆ. | 1 ರಿಂದ 8ನೇ ತರಗತಿ (ಹಿರಿಯ ಪ್ರಾಥಮಿಕ ಶಾಲೆ) | ಅನುದಾನ ರಹಿತ ರಾಜ್ಯ ಪಠ್ಯಕ್ರಮ | ಕ್ರಿಶ್ಚಿಯನ್ |



ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ
ನೃಪತುಂಗ ರಸ್ತೆ, ಬೆಂಗಳೂರು - 01

| ಸಂ | ಆಡಳಿತ ಮಂಡಳಿಯ ವಿವರ | ಶಾಲೆಯ ವಿವರ | ಘೋಷಣೆ ನೀಡಿರುವ ತರಗತಿ | ಶಾಲೆಯ ವಿಧ & ಪಠ್ಯಕ್ರಮ | ಘೋಷಣಾ ಧರ್ಮದ ವಿವರ |
|---|---|---|---|---|---|
| 3 | ಸೆಂಟ್ ಆಗಸ್ಟೀನ್ ವೆಲ್ಫೇರ್ ಅಸೋಸಿಯೇಷನ್, ನಂ.536, ಜಾನ್ ರಸ್ತೆ, ಕಮ್ಮನಹಳ್ಳಿ, ಬೆಂಗಳೂರು-560084. | ಸೆಂಟ್ ಆನ್ಸ್ ಪ್ರಾಥಮಿಕ ಮತ್ತು ಪ್ರೌಢಶಾಲೆ, ನಂ. 536, ಜಾನ್ ರಸ್ತೆ, ಕಮ್ಮನಹಳ್ಳಿ, ಬೆಂಗಳೂರು-560084 | 1 ರಿಂದ 10ನೇ ತರಗತಿ (ಹಿರಿಯ ಪ್ರಾಥಮಿಕ & ಪ್ರೌಢ ಶಾಲೆ) | ಅನುದಾನ ರಹಿತ ರಾಜ್ಯ ಪಠ್ಯಕ್ರಮ | ಕ್ರಿಶ್ಚಿಯನ್ |
| 4 | ಪ್ರೂಡೆಂಟ್ ಎಜುಕೇಷನಲ್ ಟ್ರಸ್ಟ್, ನಂ.115, ಆಶಿಯಾನ, 5ನೇ ಕ್ರಾಸ್, ಹೆಚ್.ಎಸ್.ಆರ್. ಲೇಔಟ್, ಬೆಂಗಳೂರು-560 068 | ಪ್ರೂಡೆಂಟ್ ಹಿರಿಯ ಪ್ರಾಥಮಿಕ ಶಾಲೆ, ನಂ.147/148, ಕಾವೇರಿ ನಗರ, ಸಾತಗಳ್ಳಿ, ಔಟರ್ ರಿಂಗ್ ರಸ್ತೆ, ಮೈಸೂರು--570 029. | 1 ರಿಂದ 7ನೇ ತರಗತಿ (ಹಿರಿಯ ಪ್ರಾಥಮಿಕ ಶಾಲೆ) | ಅನುದಾನ ರಹಿತ ರಾಜ್ಯ ಪಠ್ಯಕ್ರಮ | ಮುಸ್ಲಿಂ |
| 5 | ಐ. ಕುಳವೂರು ಎಜುಕೇಷನ್ ಅಂಡ್ ಚಾರಿಟೇಬಲ್ ಟ್ರಸ್ಟ್ (ರಿ), ಕುಪ್ಪೆಪದವು, ಮಂಗಳೂರು ತಾಲ್ಲೂಕು & ಜಿಲ್ಲೆ-574144 | ಕಾವೇರಿ ಹಿರಿಯ ಪ್ರಾಥಮಿಕ ಶಾಲೆ, ಕುಪ್ಪೆಪದವು, ಮಂಗಳೂರು ತಾಲ್ಲೂಕು & ಜಿಲ್ಲೆ-574144 | 1 ರಿಂದ 8ನೇ ತರಗತಿ (ಹಿರಿಯ ಪ್ರಾಥಮಿಕ ಶಾಲೆ) | ಅನುದಾನ ರಹಿತ ರಾಜ್ಯ ಪಠ್ಯಕ್ರಮ | ಮುಸ್ಲಿಂ |
| 6 | ಸೆಂಟ್ ಜವೇರಿಯಾ ಎಜುಕೇಷನ್ ಸೊಸೈಟಿ (ರಿ), ನಂ.21/3, ಎಸ್.ಆರ್. ಲೇಔಟ್, ವಿದ್ಯಾ ಸಾಗರ, ಥಣಿಸಂದ್ರ ಮುಖ್ಯರಸ್ತೆ, ಬೆಂಗಳೂರು-77 | ಸೆಂಟ್ ಜವೇರಿಯಾ ಇಂಗ್ಲೀಷ್ ಪ್ರೌಢಶಾಲೆ, ನಂ.21/3, ಎಸ್.ಆರ್. ಲೇಔಟ್, ವಿದ್ಯಾ ಸಾಗರ, ಥಣಿಸಂದ್ರ ಮುಖ್ಯರಸ್ತೆ, ಬೆಂಗಳೂರು-77 | 1 ರಿಂದ 10ನೇ ತರಗತಿ (ಹಿರಿಯ ಪ್ರಾಥಮಿಕ & ಪ್ರೌಢ ಶಾಲೆ) | ಅನುದಾನ ರಹಿತ ರಾಜ್ಯ ಪಠ್ಯಕ್ರಮ | ಮುಸ್ಲಿಂ |

ಷರತ್ತುಗಳು:

1. ಶಾಲೆಗಳನ್ನು ನಡೆಸುವ ಆಡಳಿತ ಮಂಡಳಿಯು ಟ್ರಸ್ಟ್/ಸೊಸೈಟಿ ಕಾಯಿದೆ ಪ್ರಕಾರ ನೋಂದಣಿಯಾಗಿರಬೇಕು ಮತ್ತು ಕಾಲಕಾಲಕ್ಕೆ ನವೀಕರಿಸಬೇಕು.
2. ಶಾಲೆಯ ಆಡಳಿತ ಮಂಡಳಿಯ ಸದಸ್ಯರು ಕಾರ್ಯಕಾರಿ ಸಮಿತಿಯಲ್ಲಿದ್ದರೆ, ಆಯಾ ಮತೀಯ ಅಲ್ಪಸಂಖ್ಯಾತ ಸದಸ್ಯರ ಸಂಖ್ಯೆ ಕನಿಷ್ಠ ಮೂರನೇ ಎರಡರಷ್ಟಿರಬೇಕು.
3. ಶಾಲೆಯನ್ನು ನಡೆಸುವ ಮತೀಯ ಅಲ್ಪಸಂಖ್ಯಾತ ಆಡಳಿತ ಮಂಡಳಿಯ ಸದಸ್ಯರು ಕಾರ್ಯಕಾರಿ ಸಮಿತಿಯಲ್ಲಿದ್ದರೆ, ಸದರಿ ಸದಸ್ಯರು ಸಂಬಂಧಿಸಿದ ತಹಶೀಲ್ದಾರರಿಂದ ಜಾತಿ ಪ್ರಮಾಣ (ಧರ್ಮ ನಮೂದಿಸಿರಬೇಕು) ಪತ್ರವನ್ನು ಪಡೆದಿರಬೇಕು.
4. ಮತೀಯ ಅಲ್ಪಸಂಖ್ಯಾತರು ನಡೆಸುತ್ತಿರುವ ಪ್ರಾಥಮಿಕ ಶಾಲೆ/ ಪ್ರೌಢ ಶಾಲೆಗಳನ್ನು ನಡೆಸಲು ಕರ್ನಾಟಕ ಶಿಕ್ಷಣ ಕಾಯ್ದೆಯಡಿಯಲ್ಲಿ ಇಲಾಖೆಯಿಂದ ನೋಂದಾಯಿಸಿರಬೇಕು ಮತ್ತು ಕಾಲಕಾಲಕ್ಕೆ ಶಾಲಾ ಮಾನ್ಯತೆಯನ್ನು ನವೀಕರಿಸಿರಬೇಕು.
5. ಮತೀಯ ಅಲ್ಪಸಂಖ್ಯಾತ ಶಾಲೆಗಳೆಂದು ಘೋಷಣೆಗೊಂಡ ಶೈಕ್ಷಣಿಕ ವರ್ಷದಿಂದ 3 (ಮೂರು) ವರ್ಷಗಳಿಗೊಮ್ಮೆ ಘೋಷಣಾ ಪತ್ರ ನವೀಕರಿಸಲು ಅಗತ್ಯ ದಾಖಲೆಗಳೊಂದಿಗೆ ಪ್ರಸ್ತಾವನೆಯನ್ನು ಸಮುಚಿತ ಮಾರ್ಗದಲ್ಲಿ ಸಲ್ಲಿಸುವುದು.
6. ಮತೀಯ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಯವರು ನಡೆಸುತ್ತಿರುವ ಶಾಲೆಗಳಲ್ಲಿ ಆಯಾಯ ಮತೀಯ ಅಲ್ಪಸಂಖ್ಯಾತ ವಿದ್ಯಾರ್ಥಿಗಳು ಆಯಾ ವರ್ಷದಲ್ಲಿ ಕನಿಷ್ಠ ಶೇ. 25 ಶೈಕ್ಷಣಿಕ ದಾಖಲಾತಿ ಹೊಂದಿರಬೇಕು.
7. ಸರ್ಕಾರ ಕಾಲಕಾಲಕ್ಕೆ ಹೊರಡಿಸುವ ಆದೇಶದಲ್ಲಿ ನಮೂದಿಸಿರುವ ಮಾನದಂಡಗಳನ್ನು ಪಾಲಿಸಲು ಬದ್ಧರಾಗಿರಬೇಕು.

ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ
ನೃಪತುಂಗ ರಸ್ತೆ, ಬೆಂಗಳೂರು - 01